ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೊಟ್ಟ ಸಲಹೆ ತುಂಬಾ ಉಪಯುಕ್ತವಾದದ್ದು, 1 ರಿಂದ 2ನೇ ತರಗತಿಯ ಮಕ್ಕಳ ವಯಸ್ಸು ಒಂದು ಇರುತ್ತದೆ. 2 ರಿಂದ ಮೇಲ್ಪಟ್ಟ ಮಕ್ಕಳ ವಯಸ್ಸು ಜಾಸ್ತಿ ಇರುತ್ತದೆ, ಕಳೆದ ವರ್ಷ ಕೊಟ್ಟಿದ್ದಕ್ಕಿಂತ 10 ಮೀಟರ್ ಜಾಸ್ತಿ ಈ ವರ್ಷ ಕೊಟ್ಟಿದ್ದೇವೆ.

11.10 ಎ.ಎಂ.

ಅಧ್ಯಕ್ಷರು : ಅರಗ ಜ್ಞಾನೇಂದ್ರರವರೇ, ನಿಮ್ಮ ತಡೆ ಹಿಡಿಯಲಾದ ಪ್ರಶ್ನೆಗೆ ಉತ್ತರಿಸಲು ಅರಣ್ಯ ಮಂತ್ರಿಗಳು ಸಮಯ ಕೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾಳೆ ಉತ್ತರ ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೇ, ಪೆನ್ನಿ ಫ್ಯಾಕ್ಟರಿ ಬಗ್ಗೆ ನಾನು ಕೇಳಿರುವುದು. ಇದಕ್ಕೇಕೆ ಉತ್ತರಿಸಲು ಸಮಯಬೇಕು. ಹಿಂದೆಮುಂದೆ ನೋಡಬೇಕು.

ಅಧ್ಯಕ್ಷರು : ನೀವು ಪೆನ್ನಿ ಬಗ್ಗೆ ಕೇಳಿರುವುದಕ್ಕೆ ಸಮಯ ಕೇಳಿರುವುದು. ಈಗ ನೀವು ಆನೆಯ ಬಗ್ಗೆ, ಹಂದಿಯ ಬಗ್ಗೆ ಕೇಳಿದಿರಿ, ಅದಕ್ಕೆ ಅವರು ಉತ್ತರ ಹೇಳಲಿಲ್ಲವೆ? ನೀವು ಪೆನ್ನಿ ಬಗ್ಗೆ ಕೇಳಿರುವುದಕ್ಕೆ ಲೀಟ್ ಆಗುತ್ತಿರುವುದು. ನಾನು ಉತ್ತರ ತರಿಸಿಕೊಡುತ್ತೇನೆ.

ತಡೆ ಹಿಡಿಯಲಾದ ಪ್ರಶ್ನೆ ಸಂಖ್ಯೆ 486(3955)

Problems of Gangolli notified area people

486 - Sri K. Prathapchandra Shetty (Kundapur) : Will the Hon'ble Minister for Rural Development and Panchayat Raj be pleased to state?

a) *Whether it has come to the notice of Government that the public in Gangolli notified area are facing problem as proper arrangements are not made for sanitation, street lights and drinking water.*

b) *If so, what action has been taken by Govt. to set right this?*

Sri. M.P. Prakash (Minister for RD & PR) :

a) Yes

b) Government in RDPR has given permission on 8.8.97 to D.C to declare Gangolli as Grama Panchayat. Grants will be released after it is converted into G.P to provide necessary facilities.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಗಂಗೊಳ್ಳಿ ಎನ್ನತಕ್ಕಂಥ ಪ್ರದೇಶ ಅನುಸೂಚಿತ ಪ್ರದೇಶವಾಗಿತ್ತು. ಅದೇ ರೀತಿಯಲ್ಲಿ ಉಳ್ಳಾಲದ ಸೋಮೇಶ್ವರ, ವಿಟ್ಲದ ಪುದು, ಇವುಗಳನ್ನೆಲ್ಲಾ ಗ್ರಾಮ ಪಂಚಾಯಿತಿಯಾಗಿ ಪರಿವರ್ತಿಸಿರುವ ಬಗ್ಗೆ ಮೊಟ್ಟಮೊದಲನೆಯದಾಗಿ ತಮಗೆ ಧನ್ಯವಾದಗಳು. ಏಕೆಂದರೆ ಇವುಗಳು ತ್ರಿಶಂಕು ಸ್ಥಿತಿಯಲ್ಲಿದ್ದವು. ಆ ಕಡೆಯಿಂದ ನೋಡುವುದಕ್ಕೆ ಹೋದರೆ ಪಂಚಾಯತಿಯೂ ಅಲ್ಲ ಈ ಕಡೆಯಿಂದ ನೋಡುವುದಕ್ಕೆ ಹೋದರೆ ಗ್ರಾಮ ಪಂಚಾಯತಿಯೂ ಆಗಿರಲಿಲ್ಲ, ಈ ಒಂದು ಪರಿಸ್ಥಿತಿಯಲ್ಲಿದ್ದಂಥ ಗಂಗೊಳ್ಳಿಯನ್ನು ತಾವು ಗ್ರಾಮ ಪಂಚಾಯತಿಯನ್ನಾಗಿ ಮಾಡಿ ಮುಕ್ತಿಯನ್ನು ಕೊಟ್ಟಿದ್ದೀರಿ. ಈಗ ನಾವು ಹೇಳುವುದೇನೆಂದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಯಾವುದೇ ಬೆಳವಣಿಗೆಗಳು ಆಗದೇ ಇರುವ ಪ್ರದೇಶಗಳನ್ನು ತಾವು ಹೊಸದಾಗಿ ರೂಪಿಸಿರುವ 'ಸ್ವಸ್ತಿ' ಯೋಜನೆಯಡಿಯಲ್ಲಿ ತರುತ್ತಿದ್ದೀರಿ. ಅದೇ ರೀತಿ ಗಂಗೊಳ್ಳಿಯನ್ನು ಈ ಸ್ವಸ್ತಿಯಡಿಯಲ್ಲಿ ತರುತ್ತೀರಾ?

ಶ್ರೀ ಐ.ಎಂ. ಜಯರಾಮಶೆಟ್ಟಿ : ಮಾನ್ಯ ಅಧ್ಯಕ್ಷರೇ, ಉಳ್ಳಾಲದಲ್ಲಿ ಕಳೆದ 7 ವರ್ಷಗಳಿಂದ ಸೋಮೇಶ್ವರ ಪ್ರದೇಶ ನೋಟಿಫೈಡ್ ಏರಿಯಾವಾಗಿದೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಈ ಸದನದಲ್ಲಿ ಕೇಳಿದ್ದೇನೆ. ಆದರೆ ನನಗೆ ಯಾವುದೇ ನಿರ್ದಿಷ್ಟ ಉತ್ತರ ಬಂದಿಲ್ಲ. ಇಲ್ಲಿಯವರೆಗೆ ಯಾವುದೇ ಅನುದಾನ ಕೂಡ ಬಂದಿಲ್ಲ.

ಅಧ್ಯಕ್ಷರು : ಉತ್ತರ ಬಂದಿದೆ. ನೀವು ಹೇಳಿದಿರಿ. ಅದಾದಮೇಲೆ ನಾನು ಮಧ್ಯ ಪ್ರವೇಶ ಮಾಡಿದೆ, ಅದೇ ದಿವಸ ಕಾರ್ಯದರ್ಶಿಗಳು ನನಗೆ ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಅವುಗಳನ್ನೆಲ್ಲಾ ಈಗ ಪರಿವರ್ತನೆ ಮಾಡಿದ್ದಾರೆ. ಅವೆಲ್ಲಾ ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಬಂದಿದೆ. ಈಗ ಅನುದಾನ ಕೊಡುವ ಬಗ್ಗೆ ನಿಮ್ಮಗಳ ಮೂರು ಕ್ಷೇತ್ರಗಳಲ್ಲಿರತಕ್ಕಂಥ ಗ್ರಾಮಗಳು ಯಾವುವಿವೆ ಅವುಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಸರ್ಕಾರಿ ಆದೇಶ ಹೊರಗೆ ಬಿದ್ದಿದೆ. ಅದರ ನಕಲನ್ನು ಕಳುಹಿಸಿಕೊಟ್ಟಿದ್ದಾರೆ. ಅದನ್ನು ತಮಗೂ ಕಳುಹಿಸಿಕೊಡುತ್ತಾರೆ. ಆ ಸಮಸ್ಯೆ ಪರಿಹಾರವಾಗಿದೆ. ಇನ್ನು ಎರಡನೆಯ ಹಂತದಲ್ಲಿ ಅನುದಾನವನ್ನು ರಿಲೀಸ್ ಮಾಡಬೇಕಾಗಿದೆ. ಅದಕ್ಕೆ ಅವರು ಉತ್ತರ ಹೇಳಲಿ.

ಶ್ರೀ ಐ.ಎಂ. ಜಯರಾಮ್ ಶೆಟ್ಟಿ : ಅನುದಾನವನ್ನೇ ಅದಷ್ಟು ಬೇಗ ಬಿಡುಗಡೆ ಮಾಡಬೇಕು.

ಅಧ್ಯಕ್ಷರು : ಕೊಡಿಸಿಕೊಡುತ್ತಾರೆ. ಪ್ರಕಾಶ್‌ರವರು ಧಾರಾಳವಾಗಿ ಕೊಡುತ್ತಾರೆ. ಅದರಲ್ಲಿ ಯಾವ ಅನುಮಾನ ಬೇಡ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮೊದಲು ಯಾವುದೋ ಹುಸಿ ಪ್ರತಿಷ್ಠೆಗಾಗಿ ಮಧ್ಯಂತರ ಮಂಡಲ ಪಂಚಾಯತ್‌ಗಳಾಗಿದ್ದದ್ದನ್ನು ನಗರ ಪ್ರದೇಶಗಳೆಂದು ಹೇಳಿ ಅಧಿಸೂಚಿತ ಪ್ರದೇಶಗಳೆಂದು ಮಾಡಿಕೊಂಡರು. ಅದು ಯಾವ ಕಾರಣಗಳಿಗಾಗಿ ಮಾಡಿಕೊಂಡರೋ ಗೊತ್ತಿಲ್ಲ. ಅದಾದನಂತರ ಅದರ ಮೂಲಕ ಜನೋಪಯೋಗಿ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ ಮೇಲೆ ಇಷ್ಟು ದೊಡ್ಡ ಜನಸಂಖ್ಯೆ ಇದ್ದರೂ ಕೂಡ ಅಲ್ಲಿಯ ಅಭಿವೃದ್ಧಿಯ ದೃಷ್ಟಿಯಿಂದ ನಾವು 08-08-97ರಂದು ಒಪ್ಪಿಗೆಯನ್ನು ಕೊಟಮೇಲೆ ದಿನಾಂಕ 23-08-97ರಂದು ಜಿಲ್ಲಾಧಿಕಾರಿಗಳು

ಈಗಾಗಲೇ ಅವುಗಳನ್ನು ಜಿಲ್ಲಾ ಪಂಚಾಯತಿಯನ್ನಾಗಿ ಮಾಡಿದ್ದಾರೆ. ಚುನಾವಣಾ ಆಯೋಗಕ್ಕೆ ಅಲ್ಲಿ ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟಂತೆ ನಿಗಧಿತ ವೇಳಾ ಪಟ್ಟಿಯನ್ನು ನಿರ್ಧಾರ ಮಾಡುವುದಕ್ಕಾಗಿ ನಾವು ಕಳುಹಿಸಿಕೊಟ್ಟಿದ್ದೇವೆ. ಅನುದಾನ ಕೊಡುವುದಕ್ಕೆ ಸಂಬಂಧಪಟ್ಟಂತೆ ಗ್ರಾಮ ಪಂಚಾಯತಿಯನ್ನಾಗಿ ನಾವು ಎಂದು ಮಾಡುತ್ತೇವೋ ಅವೊತ್ತಿನ ದಿನದಿಂದ ನಾವು ಅನುದಾನ ಕೊಡಬಹುದೇ ವಿನಃ ಅದರ ಹಿಂದಿನ ದಿವಸಗಳಿಗೆ ಅನುದಾನವನ್ನು ಕೊಡುವುದಕ್ಕೆ ಆಗುವುದಿಲ್ಲ. ಪಾಪ ಅವರಿಗೆ ಈಗಾಗಲೇ ಕಷ್ಟವಾಗಿದೆ. ನಿಜವಾಗಿಯೂ ನನಗೆ ಅವರ ಬಗ್ಗೆ ಸಹಾನುಭೂತಿ ಇದೆ. ಆದರೆ, ನನಗಾಗಿರುವ ತೊಂದರೆ ಎಂದರೆ ಅವರಿಗೆ ಹಣ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ಮುಂದೆ ಬರತಕ್ಕಂಥ ಹಣದಲ್ಲಿ ಹೆಚ್ಚು ಹಣವನ್ನು ಪ್ರಯತ್ನಪಡುತ್ತೇನೆ.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ಈಗಾಗಲೇ ಅದು ಹಿಂದುಳಿದ ಪ್ರದೇಶವೆಂದು ನಿಮಗೇ ಗೊತ್ತಿದೆ ಹಿಂದುಳಿದ ಪ್ರದೇಶವನ್ನು ಮುಂದೆ ತರುವ ಉದ್ದೇಶದಿಂದ 'ಸ್ವಸ್ತಿ' ಎನ್ನುವ ಯೋಜನೆಯನ್ನು ತಾವು ರೂಪಿಸಿದ್ದೀರಿ. ಈ ಮೂರನ್ನೂ ಮಾಡಿ. ಏಕೆಂದರೆ ಹೆಂಡ ಎಂದರೆ ಆಗುವುದಿಲ್ಲ. ಹೆಂಡ ಬೇಡವೆಂದು ಹೇಳಿ ನಿರ್ಧಾರ ತೆಗೆದುಕೊಂಡರೂ ಕೂಡ ಹೆಂಡದಂಗಡಿಯನ್ನು ತೆಗೆಯುತ್ತಾರೆ. ಅದು ಅಬಕಾರಿ ಇಲಾಖೆ, ಆದರೆ ಇವರದು ಗ್ರಾಮೀಣಾಭಿವೃದ್ಧಿ, ಇವರಿಗೂ ಮತ್ತು ಅವರಿಗೂ ಲಿಂಕ್ ಇಲ್ಲ, ಆ ಲೈಸೆನ್ಸ್‌ಗೆ ಬೆಲೆಯಿಲ್ಲ, ನಿಮ್ಮ ನಿರ್ಧಾರಕ್ಕೆ ಅಲ್ಲಿ ಬೆಲೆ ಸಿಗುವುದಿಲ್ಲ.

ಅಧ್ಯಕ್ಷರು : ಇಲಾಖೆಗಳಿಗೆ ಲಿಂಕ್ ಇಲ್ಲ ಹಳ್ಳಿ ಮತ್ತು ಹೆಂಡಕ್ಕೆ.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ಅದೇ ಹೇಳಿದ್ದು. ಅದೇನೇ ಇರಲಿ, ಈ ಮೂರು ಆ ಸ್ವಸ್ತಿ ಗ್ರಾಮ ಯೋಜನೆಗೆ ಸೇರಿಸುವ ಬಗ್ಗೆ...

ಅಧ್ಯಕ್ಷರು : ಆ ನಿಮ್ಮ ಸಲಹೆಯನ್ನು ಪರಿಶೀಲಿಸುತ್ತಾರೆ.

ಶ್ರೀ ಕೆ. ಪ್ರತಾಪ್‌ಚಂದ್ರ ಶೆಟ್ಟಿ : ಪರಿಶೀಲನೆಯಲ್ಲ, ಅದರ ಬಗ್ಗೆ ಇಲ್ಲಿ ಹೇಳಿಬಿಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ನಮ್ಮ ಗ್ರಾಮೀಣಾಭಿವೃದ್ಧಿ ಕುಂಠಿತವಾಗುವುದೇ ಆ ಹೆಂಡದಂಗಡಿಗಳಿಂದ. ಆದುದರಿಂದ, ನನ್ನ ಅವರ ಮಧ್ಯೆ ನೇರ ಸಂಬಂಧಗಳೂ ಕೂಡ ಇದೆ. ಅದೇನೇ ಇದ್ದರೂ ಅದು ಹೊಸ ವಿಷಯ. ಆದರೆ, ಸ್ವಸ್ತಿ ಗ್ರಾಮ ಯೋಜನೆಗೆ ಇದನ್ನು ಅಳವಡಿಸುವುದಕ್ಕೆ ಏಕೆ ಆಗುವುದಿಲ್ಲವೆಂದರೆ, ಗಂಗೊಳ್ಳಿ ಗ್ರಾಮ ಪಂಚಾಯತಿಯ ಗ್ರಾಮದ ಜನಸಂಖ್ಯೆ 10 ಸಾವಿರಕ್ಕಿಂತ ಹೆಚ್ಚಾಗುತ್ತದೆಯಾದ ಕಾರಣ ಬೇರೆ ರೀತಿಯಿಂದ ಸ್ವಲ್ಪ ಹೆಚ್ಚು ಹಣವನ್ನು ಕುಡಿಯುವ ನೀರಿಗಾಗಿ ಕೊಡಬಹುದು.

ಶ್ರೀ ಐ. ಎಂ. ಜಯರಾಮಶೆಟ್ಟಿ : ಈ ವರ್ಷದಲ್ಲಿ ಸ್ವಲ್ಪ ಅನುದಾನ ಕೊಡಬೇಕು.

ಅಧ್ಯಕ್ಷರು : ಈಗಾಗಲೇ ಅವರು ಹೇಳಿದ್ದಾರಲ್ಲ. ನೋಡಿ ಇಲ್ಲಿ ಭಾಷೆ ಸಮಸ್ಯೆ ಬೇರೆ ನಮಗೆ ಇದೆ. ಅವರು ಏನು ಹೇಳಿದರೆಂದರೆ, ಈಗಾಗಲೇ ಆದೇಶವನ್ನು ಹೊರಡಿಸಿದ್ದೇವೆ, ಚುನಾವಣಾ ಆಯೋಗಕ್ಕೆ ಅಲ್ಲಿ ಚುನಾವಣೆ ನಡೆಸುವುದಕ್ಕೆ ವ್ಯವಸ್ಥೆಯನ್ನು ಮಾಡಲು ಪತ್ರವನ್ನು ಬರೆದಿದ್ದೇವೆ. ಅಲ್ಲಿ

ಗ್ರಾಮ ಪಂಚಾಯತಿ ಎಂದು ಪರಿವರ್ತನೆ ಮಾಡಿದ ದಿವಸದಿಂದ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯಾದರೂ ಅವರ ಪರಿಸ್ಥಿತಿಯನ್ನು ಗಮನಿಸಿ ಹೆಚ್ಚು ಅನುದಾನವನ್ನು ಬಿಡುಗಡೆ ಮಾಡುತ್ತೇನೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ನೀವು ಸರಿಯಾಗಿ ತಿಳಿದುಕೊಳ್ಳದಿದ್ದರೆ ಹೇಗೆ?

(ಪ್ರಶ್ನೋತ್ತರ ವೇಳೆ ಮುಗಿಯಿತು.)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ ಒಟ್ಟು 66ರಲ್ಲಿ 37ಕ್ಕೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಎಂ.ಪಿ.ಎಂ. ಮೂಲಕ ಪಲ್ಪ್ ಮರ ಬೆಳೆಯಲು ನೀಡಿದ ಜಮೀನಿನ ವಿಸ್ತೀರ್ಣ

2868 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭದ್ರಾವತಿಯ ಎಂ.ಪಿ.ಎಂ. ಹಾಗೂ ಹರಿಹರ ಪಾಲಿಫೈಬರ್‌ಗಳಿಗೆ ಆಕೇಶಿಯಾ, ಯುಕೋ ಇತ್ಯಾದಿ ಪಲ್ಪ್ ಸಂಬಂಧಿತ ಮರ ಬೆಳೆಯಲು ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಅರಣ್ಯ (ಎಕರೆ) ನೀಡಲಾಗಿದೆ, ಎಲ್ಲೆಲ್ಲಿ ಯಾವ ಸರ್ವೆ ನಂಬರ್‌ಗಳಲ್ಲಿ ಭೂಮಿ ನೀಡಲಾಗಿದೆ?*

ಆ) *ಪರವಾನಗಿ ನೀಡುವಾಗ ಸರ್ವೆ ಆಳತೆ ಮಾಡಿಸಿ ನೀಡಲಾಗಿದೆಯೇ?*

ಇ) *ಈ ಪರವಾನಗಿ ಇಲ್ಲದೆ ಖಾಸಗಿಯವರ ಜಮೀನಿನಲ್ಲಿ ಎಂ.ಪಿ.ಎಂ. ಹಾಗೂ ಪಾಲಿಫೈಬರ್ ಸಂಸ್ಥೆಗಳವರು ಪಲ್ಪ್ ಮರ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಪ್ರಕರಣಗಳ ವಿವರ ತಿಳಿಸುವುದು? ಇದರಿಂದ ಸಂಸ್ಥೆಗಾದ ನಷ್ಟ ಎಷ್ಟು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

ಅ) ವಿವರಗಳ ಪಟ್ಟಿ ಲಗತ್ತಿಸಲಾಗಿದೆ.

ಆ) ಹೌದು

ಇ) ಎಂ.ಪಿ.ಎಂ. ಖಾಸಗಿ ಜಮೀನಿನಲ್ಲಿ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪಾಲಿಫೈಬರ್ ಸಂಸ್ಥೆಗಳು ಖಾಸಗಿ ಜಮೀನಿನಲ್ಲಿ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಈ) 38 ಹೆಕ್ಟೇರುಗಳನ್ನೊಳಗೊಂಡ 12 ಪ್ರಕರಣಗಳಿವೆ. ಇದರಿಂದ ಸಂಸ್ಥೆಗೆ ನಷ್ಟ ಆಗಿಲ್ಲ.